# ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ.

2 ನೇ ಮಹಡಿ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣದ ಹತ್ತಿರ, ಕೆಂಪೇಗೌಡ ರಸ್ತೆ, ಬೆಂಗಳೂರು- 560 009,

ದೂ : 080 22114233, ಫ್ಯಾಕ್ಸ್ 22133558 ಈ ಮೇಲ್ : cmdkplc@gmail.com


ಕ್ರ. ಕೆ.ಪಿ.ಎಲ್.ಸಿ./ಲೆಕ್ಕ/ಸಿಆರ್/37/2012-13 ದಿ : 21-6-2013,

## : ಅಧಿಕೃತ ಜ್ಞಾಪನ :

ವಿಷಯ : ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ, ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ,ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ,

ಉಲ್ಲೇಖ : 1. ಸರ್ಕಾರದ ಆದೇಶ ಕ್ರ. ಆರ್.ಡಿ. 649 ಎಲ್.ಜಿ.ಬಿ. 2012 ದಿನಾಂಕ 01-10-2012 ಹಾಗೂ ಪರಿಷ್ಕೃತ ಆದೇಶ 16-10-2012, 21-3-2013

2. ಈ ನಿಗಮದ ಅಧಿಕೃತ ಜ್ಞಾಪನ ಕ್ರ. ಸಮಸಂಖ್ಯೆ ದಿನಾಂಕ 18-12-2012, 29-01-2013.

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿಯಮಮಿತ, ಇವರಿಗೆ 2012-13 ನೇ ಸಾಲಿನ ಆಯವ್ಯದಲ್ಲಿ ರೂ 1000.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಇದುವರೆಗೆ 500.00 ಲಕ್ಷಗಳನ್ನು ವಿವಿಧ ಜಿಲ್ಲಾಧಿಕಾರಿಗಳಿಗೆ ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು 450.00 ಲಕ್ಷಗಳ ಅನುದಾನ ಉಲ್ಲೇಖ 1 ರ ದಿನಾಂಕ 21-3-2013 ಸರ್ಕಾರದ ಆದೇಶದ ಕೆಳಗೆ ನಿಗಮಕ್ಕೆ ಬಿಡುಗಡೆ ಆಗಿರುತ್ತದೆ.

ಆದ್ದರಿಂದ ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ ಈ ಜ್ಞಾಪಕಕ್ಕೆ ಲಗತ್ತಿಸಿದ ಅನುಬಂಧ-1 ರ ಅಂಕಣ 3 ರಲ್ಲಿ ತೋರಿಸಿದ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡ ಶರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

### : ಷರತ್ತುಗಳು :

1. ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಆ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದು ಹಾಗೂ ಅನ್ಯ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.
2. ಬಿಡುಗಡೆ ಮಾಡಿರುವ ಅನುದಾನ ವೆಚ್ಚ ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯಿದೆ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
3. ತಂತಿ ಬೇಲಿ ಕಾಂಗಾರಿಗಳನ್ನು ಕೈಗೊಳ್ಳುವಾಘ ಪ್ರಮುಖವಾಘಿ ನಗರ ಪ್ರದೇಶಗಳಲ್ಲಿ ಪದೇ ಪದೇ ಒತ್ತುವರಿಯಾಗುವ ಸಂಭವ ಇರುವ ಜಮೀನುಗಳಿಗೆ ಆದ್ಯತೆ ನೀಡತಕ್ಕದ್ದು.
4. ಅನುದಾನ ಬಳಕೆ ಮಾಡಿದ 30 ದಿನದ ಒಳಗಾಗಿ ವಿನಿಯೋಗ ಪತ್ರವನ್ನು ( Utilization Certificate ) ಅಗತ್ಯ ವಿವರ ಹಾಗೂ ವರದಿಗಳೊಂದಿಗೆ ಈ ನಿಗಮಕ್ಕೆ ಸಲ್ಲಿಸತಕ್ಕದ್ದು.
5. ಅನುದಾನ ಬಳಕೆ ಖರ್ಚು ವೆಚ್ಚಗಳ ತಂಖ್ತೆಯನ್ನು ತಪ್ಪದೇ ಸಲ್ಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ.
ಬೆಂಗಳೂರು

ಪ್ರತಿ :

1. ಮಹಾಲೇಖಪಾಲರು ( ಲೆಕ್ಕ ಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ ಬೆಂಗಳೂರು,
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರ.
3. ಖಜಾನೆ ನಿರ್ದೇಶಕರು, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.

4. ನಿರ್ದೇಶಕರು, ಎನ್.ಐ.ಸಿ. ಖನಿಜ ಭವನ, ಬೆಂಗಳೂರು,
5. ಜಿಲ್ಲಾಧಿಕಾರಿಗಳು, As per list ..ಜಿಲ್ಲೆ ಇವರಿಗೆ ಇಂಡಿಯನ್ ಬ್ಯಾಂಕ್ ಚೆಕ್ ನಂ As per List ..ದಿನಾಂಕ 20/6/13 ರೊಂದಿಗೆ ರವಾನಿಸಿದೆ.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ –7), ವಿಧಾನ, ವಿಧಾನ ಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
8. ಲೆಕ್ಕಾಧಿಕಾರಿಗಳು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ, ಬೆಂಗಳೂರು,
9. ಹೆಚ್ಚುವರಿ ಪ್ರತಿ.

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ.
ಬೆಂಗಳೂರು

## ಅನುಬಂಧ-1

| ಅ ನಂ | ಅನುದಾನ ಬಿಡಗಡೆ ಮಾಡಿದ ಜಿಲ್ಲೆ. | ಬಿಡುಗಡೆ ಮಾಡಿದ ಅನುದಾನ ( ಲಕ್ಷ ರೂಗಳಲ್ಲಿ) |
|---|---|---|
| 1 | 2 | 3 |
| 1 | ಬೆಳಗಾವಿ | 15.00 |
| 2 | ಬಿಜಾಪೂರ | 10.00 |
| 3 | ಬಾಗಲಕೋಟೆ | 10.00 |
| 4 | ಧಾರವಾಡ | 15.00 |
| 5 | ಹಾವೇರಿ | 10.00 |
| 6 | ಗದಗ | 10.00 |
| 7 | ಉತ್ತರಕನ್ನಡ | 15.00 |
| 8 | ಬೀದರ | 10.00 |
| 9 | ರಾಯಚೂರು | 10.00 |
| 10 | ಗುಲ್ಬರ್ಗಾ | 15.00 |
| 11 | ಯಾದಗಿರಿ | 10.00 |
| 12 | ಕೊಪ್ಪಳ | 10.00 |
| 13 | ದಾವಣಗೆರೆ | 10.00 |
| 14 | ಚಿತ್ರದುರ್ಗ | 10.00 |
| 15 | ಶಿವಮೊಗ್ಗ | 10.00 |
| 16 | ತುಮಕೂರು | 15.00 |
| 17 | ಚಿಕ್ಕಬಳ್ಳಾಪೂರ | 10.00 |
| 18 | ಕೋಲಾರ | 10.00 |
| 19 | ರಾಮನಗರ | 10.00 |
| 20 | ದಕ್ಷಿಣ ಕನ್ನಡ | 15.00 |
| 21 | ಉಡುಪಿ | 10.00 |
| 22 | ಕೊಡಗು | 10.00 |
| 23 | ಮಂಡ್ಯ | 10.00 |
| 24 | ಚಿಕ್ಕಮಗಳೂರು | 10.00 |
| | ಒಟ್ಟು | 270.00 |

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ.
ಬೆಂಗಳೂರು